<u>ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.ರವರ ನ್ಯಾಯಾಲಯ, ಜೇವರ್ಗಿ</u>

ಸಿ.ಸಿ.ನಂಃ 322/2018

ಪಿರ್ಯಾದುದಾರಃ 1. ಕರ್ನಾಟಕ ಸರ್ಕಾರದ ಪರ
ಜೇವರ್ಗಿ ಪೋಲಿಸ ಠಾಣೆ

ವಿರುದ್ಧ

ಆರೋಪಿತರು 1. ಶಿವುಕುಮಾರ ತಂದೆ ಶಂಕರ ವಿಶ್ವಕರ್ಮ,
ವಃ 20-ವರ್ಷ, ಉಃ ಚಾಲಕ
ಸಾ. ಮದರಿ, ತಾ. ಜೇವರ್ಗಿ. **----Split-up**

2. ಶೇಖಮೆಹತಾಬ ತಂದೆ ಶೇಖಕಾಸೀಮಸಾಬ ಶೇಖ
ವಃ 49-ವರ್ಷ, ಉಃ ಚಾಲಕ,
ಸಾ.ಮಹಾತ್ಮ ಪುಲೆ ನಗರ ಬೋಕರ, ತಾಃ ಬೋಕರ,
ಜಿಃ ನಾಂದೇಡ (ಮಹಾರಾಷ್ಟ್ರ).

<u>ಆಪಾದನೆ</u>

ನಾನು ಸಂದೀಪ್.ಎ.ನಾಯಿಕ್
ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾದಂ. ಜೇವರ್ಗಿ

ಆರೋಪಿತರಾದ ನೀವು 1. ಶಿವುಕುಮಾರ ತಂದೆ ಶಂಕರ ವಿಶ್ವಕರ್ಮ,
ವಃ 20-ವರ್ಷ, ಉಃ ಚಾಲಕ
ಸಾ. ಮದರಿ, ತಾ. ಜೇವರ್ಗಿ. **----Split-up**

2. ಶೇಖಮೆಹತಾಬ ತಂದೆ ಶೇಖಕಾಸೀಮಸಾಬ ಶೇಖ
ವಃ 49-ವರ್ಷ, ಉಃ ಚಾಲಕ,
ಸಾ.ಮಹಾತ್ಮ ಪುಲೆ ನಗರ ಬೋಕರ, ತಾಃ ಬೋಕರ,
ಜಿಃ ನಾಂದೇಡ (ಮಹಾರಾಷ್ಟ್ರ).

ನಿಮ್ಮ ಮೇಲೆ ಮಾಡುವ ಆಪಾದನೆ ಏನೆಂದರೆ,

ದಿನಾಂಕ 13.03.2015 ರಂದು ಸಾಯಂಕಾಲ 6.30 ಗಂಟೆ ಸಮಯದಲ್ಲಿ ಜೇವರ್ಗಿ ಪೋಲಿಸ ಠಾಣಾ ವ್ಯಾಪ್ತಿಯ ಮುದವಾಳ (ಕೆ) ಕ್ರಾಸ್ ಹತ್ತಿರ ಇರುವ ಪರಶುರಾಮ ನಾಯಕ್ ರವರ ಹೊಲದ ಹತ್ತಿರ ಜೇವರ್ಗಿ-ಶಹಾಪುರ ಮುಖ್ಯ ರಸೆಯ ಮೇಲೆ 2 ನೇ ಆರೋಪಿಯಾದ ನೀವು ಲಾರಿ ನಂ.ಎಮ್-ಹೆಚ್-38-ಡಿ-0514 ನ್ನು ಅತಿ ವೇಗ, ಅಜಾಗರೂಕತೆ ಹಾಗೂ ನಿರ್ಲಕ್ಷತನದಿಂದ ಮಾನವನ ಪ್ರಾಣಕ್ಕೆ ಹಾನಿಯನ್ನುಂಟು ಮಾಡುವ ರೀತಿಯಲ್ಲಿ ವಾಹನವನ್ನು ಚಾಲನೆ ಮಾಡಿ ಒಮ್ಮೇಲೆ ಬ್ರೇಕ್ ಹಾಕಿದ ಕಾರಣ ಹಿಂಬದಿಯಲ್ಲಿ 1 ನೇ ಆರೋಪಿ ಚಾಲನೆ ಮಾಡಿಕೊಂಡು ಬರುತ್ತಿದ್ದ ಕ್ರೂಜರ ಜೀಪ ನಂ.ಕೆಎ-32-ಎಮ್-

6243 ರ ವಾಹನ ನಿಮ್ಮ ಲಾರಿ ಹಿಂಭಾಗಕ್ಕೆ ಜೋರಾಗಿ ಡಿಕ್ಕಿಯಾಗುವಂತೆ ಮಾಡಿದ ಕಾರಣ ಭಾರತೀಯ ದಂಡ ಸಂಹಿತೆ ಕಲಂ 279 ರಡಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿದ ಬಗ್ಗೆ ಆರೋಪಿಸಲಾಗಿದೆ?

ಎರಡನೇಯದಾಗಿ ಅದೇ ದಿನ, ಸ್ಥಳ ಹಾಗೂ ಸಮಯದಂದು, 2 ನೇ ಆರೋಪಿಯಾದ ನೀವು ಲಾರಿ ನಂ.ಎಮ್-ಹೆಚ್-38-ಡಿ-0514 ನ್ನು ಅತಿ ವೇಗ, ಅಜಾಗರೂಕತೆ ಹಾಗೂ ನಿರ್ಲಕ್ಷತನದಿಂದ ಮಾನವನ ಪ್ರಾಣಕ್ಕೆ ಹಾನಿಯನ್ನುಂಟು ಮಾಡುವ ರೀತಿಯಲ್ಲಿ ವಾಹನವನ್ನು ಚಾಲನೆ ಮಾಡಿ ಒಮ್ಮೆಲೆ ಬ್ರೇಕ್ ಹಾಕಿದ ಕಾರಣ ಹಿಂಬದಿಯಲ್ಲಿ 1 ನೇ ಆರೋಪಿ ಚಾಲನೆ ಮಾಡಿಕೊಂಡು ಬರುತ್ತಿದ್ದ ಕ್ರೂಜರ ಜೀಪ ನಂ.ಕೆಎ-32-ಎಮ್-6243 ರ ವಾಹನ ನಿಮ್ಮ ಲಾರಿ ಹಿಂಭಾಗಕ್ಕೆ ಜೋರಾಗಿ ಡಿಕ್ಕಿಯಾಗುವಂತೆ ಮಾಡಿ ಸದರಿ ಕ್ರೂಜರ ವಾಹನದಲ್ಲಿದ್ದ ಮಲ್ಲಣ್ಣ ತಳವಾರ ರವರಿಗೆ ಭಾರಿ ಗಾಯಗಳಾಗಿ ಮರಣ ಹೊಂದುವಂತೆ ಮಾಡಿದ ಕಾರಣ ಭಾರತೀಯ ದಂಡ ಸಂಹಿತೆ ಕಲಂ.304(ಎ) ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿದ ಬಗ್ಗೆ ಆರೋಪಿಸಲಾಗಿದೆ?

ಮೂರನೇಯದಾಗಿ ಅದೇ ದಿನ, ಸ್ಥಳ ಹಾಗೂ ಸಮಯದಂದು, 2 ನೇ ಆರೋಪಿಯಾದ ನೀವು ಲಾರಿ ನಂ.ಎಮ್-ಹೆಚ್-38-ಡಿ-0514 ನ್ನು ಅತಿ ವೇಗ, ಅಜಾಗರೂಕತೆ ಹಾಗೂ ನಿರ್ಲಕ್ಷತನದಿಂದ ಮಾನವನ ಪ್ರಾಣಕ್ಕೆ ಹಾನಿಯನ್ನುಂಟು ಮಾಡುವ ರೀತಿಯಲ್ಲಿ ವಾಹನವನ್ನು ಚಾಲನೆ ಮಾಡಿ ಒಮ್ಮೆಲೆ ಬ್ರೇಕ್ ಹಾಕಿದ ಕಾರಣ ಹಿಂಬದಿಯಲ್ಲಿ 1 ನೇ ಆರೋಪಿ ಚಾಲನೆ ಮಾಡಿಕೊಂಡು ಬರುತ್ತಿದ್ದ ಕ್ರೂಜರ ಜೀಪ ನಂ.ಕೆಎ-32-ಎಮ್-6243 ರ ವಾಹನ ನಿಮ್ಮ ಲಾರಿ ಹಿಂಭಾಗಕ್ಕೆ ಜೋರಾಗಿ ಡಿಕ್ಕಿಯಾಗುವಂತೆ ಮಾಡಿ ಕ್ರೂಜರ ವಾಹನದಲ್ಲಿದ್ದ ಚಾ.ಸಾ.10 ರಿಂದ 17 ರವರಿಗೆ ಸಾಮಾನ್ಯ ಸ್ವರೂಪದ ಗಾಯಗಳಾಗುವಂತೆ ಮಾಡಿದ ಕಾರಣ ಭಾರತೀಯ ದಂಡ ಸಂಹಿತೆ ಕಲಂ.337 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿದ ಬಗ್ಗೆ ಆರೋಪಿಸಲಾಗಿದೆ?

ನಾಲ್ಕನೇಯದಾಗಿ ಅದೇ ದಿನ, ಸ್ಥಳ ಹಾಗೂ ಸಮಯದಂದು, 2 ನೇ ಆರೋಪಿಯಾದ ನೀವು ಲಾರಿ ನಂ.ಎಮ್-ಹೆಚ್-38-ಡಿ-0514 ನ್ನು ಅತಿ ವೇಗ, ಅಜಾಗರೂಕತೆ ಹಾಗೂ ನಿರ್ಲಕ್ಷತನದಿಂದ ಮಾನವನ ಪ್ರಾಣಕ್ಕೆ ಹಾನಿಯನ್ನುಂಟು ಮಾಡುವ ರೀತಿಯಲ್ಲಿ ವಾಹನವನ್ನು ಚಾಲನೆ ಮಾಡಿ ಒಮ್ಮೆಲೆ ಬ್ರೇಕ್ ಹಾಕಿದ ಕಾರಣ ಹಿಂಬದಿಯಲ್ಲಿ 1 ನೇ ಆರೋಪಿ ಚಾಲನೆ ಮಾಡಿಕೊಂಡು ಬರುತ್ತಿದ್ದ ಕ್ರೂಜರ ಜೀಪ ನಂ.ಕೆಎ-32-ಎಮ್-6243 ರ ವಾಹನ ನಿಮ್ಮ ಲಾರಿ ಹಿಂಭಾಗಕ್ಕೆ ಜೋರಾಗಿ ಡಿಕ್ಕಿಯಾಗುವಂತೆ ಮಾಡಿ ಕ್ರೂಜರ ವಾಹನದಲ್ಲಿದ್ದ ಚಾ.ಸಾ.6 ರಿಂದ 9 ರವರಿಗೆ ತೀವ್ರ ಸ್ವರೂಪದ ಗಾಯಗಳಾಗುವಂತೆ ಮಾಡಿದ

ಕಾರಣ ಭಾರತೀಯ ದಂಡ ಸಂಹಿತೆ ಕಲಂ.338 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿದ ಬಗ್ಗೆ ಆರೋಪಿಸಲಾಗಿದೆ?

ಐದನೆಯದಾಗಿ ಅದೇ ದಿನ, ಸ್ಥಳ ಹಾಗೂ ಸಮಯದಂದು, 2 ನೇ ಆರೋಪಿಯಾದ ನೀವು ಲಾರಿ ನಂ.ಎಮ್-ಹೆಚ್-38-ಡಿ-0514 ನ್ನು ಅತಿ ವೇಗ, ಅಜಾಗರೂಕತೆ ಹಾಗೂ ನಿರ್ಲಕ್ಷತನದಿಂದ ಮಾನವನ ಪ್ರಾಣಕ್ಕೆ ಹಾನಿಯನ್ನುಂಟು ಮಾಡುವ ರೀತಿಯಲ್ಲಿ ವಾಹನವನ್ನು ಚಾಲನೆ ಮಾಡಿ ಒಮ್ಮೇಲೆ ಬ್ರೇಕ್ ಹಾಕಿದ ಕಾರಣ ಸದರಿ ಜೇಪ್ ನಿಮ್ಮ ಲಾರಿಯ ಹಿಂಭಾಗಕ್ಕೆ ಜೋರಾಗಿ ಡಿಕ್ಕಿ ಡಿಕ್ಕಿ ಆಗುವಂತೆ ಮಾಡಿ ಸದರಿ ಅಪಘಾತದ ಸಂಗತಿಯನ್ನು ಹತ್ತಿರದ ಠಾಣೆಗೆ ತಿಳಿಸದೆ ಹಾಗೂ ಅಪಘಾತದಲ್ಲಿ ಗಾಯಗೊಂಡ ಗಾಯಾಳುಗಳನ್ನು ಆಸ್ಪತ್ರೆಗೆ ದಾಖಲಿಸದೇ ವಾಹನವನ್ನು ಅಲ್ಲೆ ಬಿಟ್ಟು ಹೋದ ಕಾರಣ ಮೋಟಾರ ವಾಹನ ಕಾಯ್ದೆ ಕಲಂ 187 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿದ ಬಗ್ಗೆ ಆರೋಪಿಸಲಾಗಿದೆ?

ಕೊನೆಯದಾಗಿ ಅದೇ ದಿನ, ಸ್ಥಳ ಹಾಗೂ ಸಮಯದಂದು, 2 ನೇ ಆರೋಪಿಯಾದ ನೀವು ಲಾರಿ ನಂ.ಎಮ್-ಹೆಚ್-38-ಡಿ-0514 ನ್ನು ವಾಹನ ಚಾಲನೆ ಪರವಾನಿಗೆ ಪಡೆಯದೇ ಅತಿ ವೇಗ, ಅಜಾಗರೂಕತೆ ಹಾಗೂ ನಿರ್ಲಕ್ಷತನದಿಂದ ಮಾನವನ ಪ್ರಾಣಕ್ಕೆ ಹಾನಿಯನ್ನುಂಟು ಮಾಡುವ ರೀತಿಯಲ್ಲಿ ವಾಹನವನ್ನು ಚಾಲನೆ ಮಾಡಿ ಒಮ್ಮೇಲೆ ಬ್ರೇಕ್ ಹಾಕಿದ ಕಾರಣ ಸದರಿ ಜೇಪ್ ನಿಮ್ಮ ಲಾರಿಯ ಹಿಂಭಾಗಕ್ಕೆ ಜೋರಾಗಿ ಡಿಕ್ಕಿಯಾಗುವಂತೆ ಮಾಡಿ ಅಪಘಾತವಾದ ಕಾರಣ ಮೋಟಾರ ವಾಹನ ಕಾಯ್ದೆ ಕಲಂ 3 ಸಹವಾಚಕ ಕಲಂ 187 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿದ ಬಗ್ಗೆ ಆರೋಪಿಸಲಾಗಿದೆ?

ಸದರಿ ಆಪಾದನೆಗಳ ಬಗ್ಗೆ ವಿಚಾರಣೆಗೆ ಗುರಿಯಾಗಬೇಕೆಂದು ಈ ಮೂಲಕ ನಿರ್ದೇಶಿಸುತ್ತೇನೆ.

ಸದರಿ ಮೇಲಿನ ಆರೋಪಣೆಗಳನ್ನು ತೆರೆದ ನ್ಯಾಯಾಲಯದಲ್ಲಿ 2 ನೇ ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ನಮೂದಿಸಿಕೊಳ್ಳಲಾಯಿತು.

ಈ ಮೇಲ್ಕಂಡ ಆರೋಪಗಳ ಬಗ್ಗೆ ವಿಚಾರಣೆಗೆ ಈ ಕೆಳಕಂಡಂತೆ ಆದೇಶಿಸುತ್ತೇನೆ.

ಪ್ರಶ್ನೆ-1ಃ ಮೇಲ್ಕಂಡ ಎಲ್ಲಾ ಆಪಾದನೆಗಳನ್ನು ಓದಿ ಹೇಳಿದ್ದು ಅರ್ಥವಾಯಿತೇ?

ಉತ್ತರಃ

ಪ್ರಶ್ನೆ-2ಃ ಸದರೀ ಆಪಾದನೆಗಳನ್ನು ಒಪ್ಪಿಕೊಳ್ಳುವೆಯೋ? ಅಥವಾ
ವಿಚಾರಣೆಯಾಗಬೇಕೋ?

ಉತ್ತರಃ

ಮೇಲ್ಕಂಡ ಎಲ್ಲಾ ಆಪಾದನೆಗಳನ್ನು ನನ್ನ ಸಮಕ್ಷಮ ಓದಿ ಹೇಳಿ ಆತನ ಹೇಳಿಕೆಯನ್ನು ಪಡೆದುಕೊಂಡು ಸತ್ಯವಾಗಿದೆ ಎಂದು ದೃಢೀಕರಿಸುತ್ತೇನೆ.

(ಸಂದೀಪ್.ಎ.ನಾಯಿಕ್)
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು
ಜೇವರ್ಗಿ

ದಿನಾಂಕಃ 22-06-2023

ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ಜೇವರ್ಗಿ

ಸಿ.ಸಿ.ನಂಃ 322/2018

ಪಿರ್ಯಾರ್ದುದಾರಃ 1. ಕರ್ನಾಟಕ ಸರ್ಕಾರದ ಪರ
ಜೇವರ್ಗಿ ಪೋಲಿಸ ಠಾಣೆ

ವಿರುದ್ಧ

2. ಶೇಖಮೆಹತಾಬ ತಂದೆ ಶೇಖಕಾಸೀಮಸಾಬ ಶೇಖ
ವಃ 49-ವರ್ಷ, ಉಃ ಚಾಲಕ,
ಸಾ.ಮಹಾತ್ಮ ಪುಲೆ ನಗರ ಬೋಕರ, ತಾಃ ಬೋಕರ,
ಜಿಃ ನಾಂದೇಡ (ಮಹಾರಾಷ್ಟ್ರ).

**ಆಪಾದನೆ**

ಪ್ರಶ್ನೆ1:– ಮೇಲ್ಕಂಡ ಆಪಾದನೆಗಳನ್ನು ಓದಿ ಹೇಳಿದ್ದು ಅರ್ಥವಾಯಿತೇ?

ಆರೋಪಿಯ ಉತ್ತರ:–

ಪ್ರಶ್ನೆ2:– ಸದರಿ ಆಪಾದನೆಗಳನ್ನು ಒಪ್ಪಿಕೊಳ್ಳುವೆಯೋ? ಅಥವಾ ವಿಚಾರಣೆಯಾಗಬೇಕೋ?

ಆರೋಪಿಯ ಉತ್ತರ:–

ಮೇಲ್ಕಂಡ ಎಲ್ಲಾ ಆಪಾದನೆಗಳನ್ನು ನನ್ನ ಸಮಕ್ಷಮ ಓದಿ ಹೇಳಿ ಆರೋಪಿತರ ಹೇಳಿಕೆಯನ್ನು ಪಡೆದುಕೊಂಡು ಸತ್ಯವಾಗಿದೆ ಎಂದು ಈ ದಿನ ದಿಃ 22–06–2023 ರಂದು ದೃಢೀಕರಿಸುತ್ತೇನೆ.

ಸ್ಥಳಃಜೇವರ್ಗಿ (ಸಂದೀಪ್.ಎ.ನಾಯಿಕ್)
ದಿನಾಂಕ:–22–06–2023 ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು
ಜೇವರ್ಗಿ.